MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 ENGLISH DAILY Subscription Yearly - Rs. - WEDNESDAY 17-5-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಮಲೇಶಿಯನ್ ಪಾಮೆಣ್ಣೆ ದರ 2 ವಾರಗಳ ಕನಿಷ್ಠ ಮಟ್ಟಕ್ಕಿಳಿಕೆ

ಹೆಚ್ಚುತ್ತಿರುವ ಉತ್ಪಾದನೆ, ಬೇಡಿಕೆ ಇಳಿಕೆಯ ಕಳವಳದಿಂದ ಮಲೇಶಿಯನ್ ಪಾಮೆಣ್ಣೆ ದರ 1.76 ಶೇಕಡಾ ಟನ್‌ಗೆ 61 ರಿಂಗಿಟ್ಸ್ ಇಳಿಕೆಯಾಗಿ 3396 ರಿಂಗಿಟ್ಸ್ ($ 765.73) ಆಗಿದೆ. ಹಿಂದಿನೆರಡು ವಾರಗಳ ಕನಿಷ್ಠ ದರ ಇದಾಗಿದೆ. ರಿಂಗಿಟ್ಸ್ ದೌರ್ಬಲ್ಯದಿಂದ ಹೆಚ್ಚಿನ ಕುಸಿತ ತಡೆಯಲ್ಪಟ್ಟಿದೆ. ಮೇ 1–15 ರ ತನಕ ಮಲೇಶಿಯಾದ ಪಾಮೆಣ್ಣೆ ಉತ್ಪಾದನೆ ಹಿಂದಿನ ತಿಂಗಳ ಇದೇ ಅವಧಿಗಿಂತ 16.72 ಶೇಕಡಾ ಹೆಚ್ಚಳವಾಗಬಹುದೆಂದು ಅಂದಾಜಿಸಲಾಗಿದೆಯೆನ್ನಲಾಗಿದೆ.

## ಕರ್ನಾಟಕದ ಮಾರುಕಟ್ಟೆಯಲ್ಲಿ ಜೋಳ ದರ ಹೆಚ್ಚಳ

ಆವಕ ಇಳಿಕೆಯಿಂದ ಕರ್ನಾಟಕದ ಮಾರುಕಟ್ಟೆಗಳಲ್ಲಿ ಜೋಳ ದರ ಹೆಚ್ಚಳವಾಗಿದೆಯೆನ್ನಲಾಗಿದೆ. ದರ ಇಳಿಕೆಯಾದರೂ ಜಾಗತಿಕ ಮಾರುಕಟ್ಟೆಯಲ್ಲಿ ಭಾರತೀಯ ಜೋಳಕ್ಕೆ ಬೇಡಿಕೆ ಇಳಿಕೆಯಾಗಿದೆಯೆನ್ನಲಾಗಿದೆ. 2023 ರಲ್ಲಿ ಬ್ರೆಜಿಲ್‌ನ ಜೋಳ ರಫ್ತು 8 ಶೇಕಡಾ ಹೆಚ್ಚಳವಾಗಬಹುದೆನ್ನಲಾಗಿದೆ. ಅಮೇರಿಕಾದ ಪೂರೈಕೆ ಹೆಚ್ಚಳದಿಂದ ಜೋಳ, ಸೋಯಾಬೀನ್ ದರ ಒತ್ತಡಕ್ಕೊಳಗಾಗಿದೆಯೆನ್ನಲಾಗಿದೆ.

## ಆಮದಿತ ಗೋಡಂಬಿ ತಿರುಳು ಲಭ್ಯತೆ ದರ ಇಳಿಕೆ

ದೇಶೀ ಮಾರುಕಟ್ಟೆಗಳಲ್ಲಿ ವಿಯೆಟ್ನಾಂ ಮತ್ತಿತರ ದೇಶಗಳಿಂದ ಆಮದಾದ ಗೋಡಂಬಿ ತಿರುಳು ಲಭ್ಯವಾಗುತ್ತಿರುವುದರಿಂದ ದರ ಗಣನೀಯ ಇಳಿಕೆಯಾಗಿದೆಯೆನ್ನಲಾಗಿದೆ. ಅಧಿಕ ದರದಲ್ಲಿ ಕಚ್ಚಾ ಗೋಡಂಬಿ ಆಮದು ಮಾಡಿರುವುದರಿಂದ ಗೋಡಂಬಿ ತಿರುಳು ದರ ಇಳಿಕೆ, ಗೋಡಂಬಿ ಸಂಸ್ಕರಣೆದಾರರಿಗೆ ಸಮಸ್ಯೆಯಾಗುತ್ತಿದೆ.